





ಗರ್ಭಗುಡಿಗಳಿವೆ. ಇವುಗಳಲ್ಲಿ ಮುಂಬದಿಗಿರುವ 11 ಗುಡಿಗಳಿಗೆ ಮಾತ್ರ ಗೋಪುರಗಳಿವೆ. ಹನ್ನೊಂದರಲ್ಲಿ ಒಂದು ಗುಡಿಯ ಗೋಪುರ ಕುಸಿದಿದೆ.

ಹಿಂದೆ ಈ ಗುಡಿಗಳಲ್ಲಿ ದೇವರ ವಿಗ್ರಹಗಳು ಇದ್ದವು ಎನ್ನುವವರಿದ್ದಾರೆ. ಈಗ ಯಾವ ಗುಡಿಯಲ್ಲೂ ವಿಗ್ರಹಗಳಿಲ್ಲ. ಶಿವ, ವಿಷ್ಣು, ಸೂರ್ಯ, ವಿನಾಯಕ, ಮೊದಲಾದ ದೇವತೆಗಳ ವಿರೂಪಗೊಂಡಿರುವ ವಿಗ್ರಹಗಳನ್ನು ಪುರಾತತ್ವ ಇಲಾಖೆಯವರು ಕೊಳದಿಂದ ಹೊರತೆಗೆದು ಮೆಟ್ಟಿಲುಗಳ ಮೇಲೆ ಜೋಡಿಸಿಟ್ಟಿದ್ದಾರೆ. ಹೊಯ್ಸಳ ಶೈಲಿಯ ಕಲಾತ್ಮಕ ವಾಸ್ತುಶಿಲ್ಪದ ಛಾಪು ಹೊಂದಿರುವ ಈ ಪುಷ್ಕರಣಿ ನಿರ್ಮಾಣಗೊಂಡು ಸುಮಾರು ಸಾವಿರ ವರ್ಷಗಳು ಸಂದಿವೆ. ಖಗೋಳಶಾಸ್ತ್ರ ಮತ್ತು ವಾಸ್ತುಶಿಲ್ಪಗಳ ಸಮನ್ವಯವನ್ನು ಇಲ್ಲಿ ಕಾಣಬಹುದು.

ಈ ಸುಂದರ ಕೊಳದಲ್ಲಿ ರಾಣಿ ಶಾಂತಲಾದೇವಿ ಸ್ನಾನ ಮಾಡುತ್ತಿದ್ದರೆಂದು ಪ್ರತೀತಿಯಿದೆ. ಹಿಂದಿನ ಕಾಲದಲ್ಲಿ ಹಳೇಬೀಡಿನ ದೇಗುಲಗಳಲ್ಲಿ ಅಭಿಷೇಕಕ್ಕೆ ಅಗತ್ಯವಾಗಿದ್ದ ನೀರನ್ನು ಈ ಕಲ್ಯಾಣಿಯಿಂದಲೇ ಪೂರೈಸಲಾಗುತ್ತಿತ್ತು ಎಂದೂ ಹೇಳಲಾಗುತ್ತದೆ. ಯುವಕ ಸಳ ಹುಲಿಕೆರೆಯಲ್ಲಿಯೇ ವಾಸವಾಗಿದ್ದುದಾಗಿ ಚರಿತ್ರೆಕಾರರು ದಾಖಲಿಸಿದ್ದಾರೆ.

ಇಂತಹ ಚಾರಿತ್ರಿಕ ಹಿನ್ನೆಲೆಯುಳ್ಳ ಪುರಾತನ ಪುಷ್ಕರಣಿಯನ್ನು ಸಮರ್ಪಕವಾಗಿ ಸಂರಕ್ಷಿಸಿ, ವೀಕ್ಷಣೆಗೆ ಬರುವ ಪ್ರವಾಸಿಗರಿಗೆ ಅಗತ್ಯ ಸೌಲಭ್ಯ ಕಲ್ಪಿಸಿದರೆ ಈ ಅಜ್ಞಾತ ಕಲ್ಯಾಣಿಯೂ ಪ್ರಖ್ಯಾತಿ ಪಡೆಯಬಲ್ಲದು. ಪ್ರವಾಸೋದ್ಯಮ ಇಲಾಖೆ ಇತ್ತ ಗಮನ ಹರಿಸಬೇಕು.